1056 ಶ್ರೀ ಮಂಜು. ಎ. : ಮಾನ್ಯ ಅಬಕಾರಿ, ವಾರ್ತಾ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆರ್ಥಿಕ ಹಿಂಜರಿತದಿಂದ ರಾಜ್ಯದಲ್ಲಿ ಎಷ್ಟು ಐಟಿ ಬಿಟಿ ಕಂಪನಿಗಳಿಗೆ ಧಕ್ಕೆಯಾಗಿದೆ;

ಆ) ಎಷ್ಟು ಜನರು ಈಗಾಗಲೇ ನೌಕರಿ ಕಳೆದುಕೊಂಡಿದ್ದಾರೆ; ಮುಂದೆ ನೌಕರಿ ಕಳೆದುಕೊಳ್ಳುವವರ ಸಂಖ್ಯೆ ಎಷ್ಟು;

ಇ) ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು?

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಅಬಕಾರಿ, ವಾರ್ತಾ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು) :

ಅ) ಆ) ಮತ್ತು ಇ)

ದಿನಾಂಕ: 31–3–2009ರಲ್ಲಿದ್ದಂತೆ ಕರ್ನಾಟಕ ರಾಜ್ಯದಲ್ಲಿ 2084 ಮಾಹಿತಿ ತಂತ್ರಜ್ಞಾನ ಕಂಪನಿಗಳು ಮತ್ತು 187 ಜೈವಿಕ ತಂತ್ರಜ್ಞಾನ ಕಂಪನಿಗಳಿರುತ್ತವೆ. ನ್ಯಾಸ್‌ಕಾಂ ಮತ್ತು ಏಬಲ್‌ಗಳಂತಹ ಕೈಗಾರಿಕೆ ಮತ್ತು ವ್ಯಾಪಾರ ಸಂಸ್ಥೆಗಳಿಂದ ನೀಡಲ್ಪಟ್ಟಿರುವ ಮಾಹಿತಿಯಂತೆ ವಿಶ್ವದ ಆರ್ಥಿಕ ಹಿಂಜರಿತದಿಂದ ಯಾವುದೇ ಉದ್ಯೋಗನಷ್ಟಗಳಿರುವುದಿಲ್ಲ. ಭಾರತದಲ್ಲಿನ ಮಾಹಿತಿ ತಂತ್ರಜ್ಞಾನ ಉದ್ಯಮದ ಬೆಳವಣಿಗೆಯು 2007–08ರಲ್ಲಿದ್ದ ಶೇಕಡ 28 ರಿಂದ 2008–09ನೇ ಸಾಲಿಗೆ ಶೇಕಡ 16ಕ್ಕೆ ಇಳಿಮುಖವಾಗಿದೆ ಹಾಗೆಯೇ ಜೈವಿಕ ತಂತ್ರಜ್ಞಾನ ಉದ್ಯಮದ ಬೆಳವಣಿಗೆಯು 2007–08 ರಲ್ಲಿದ್ದ 38 ರಿಂದ 2008–09ನೇ ಸಾಲಿನಲ್ಲಿ ಶೇಕಡ 18ಕ್ಕೆ ಇಳಿಮುಖವಾಗಿದೆ. ಆರ್ಥಿಕ ಹಿಂಜರಿತವು ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಉದ್ಯಮಗಳ ಆದಾಯದ ಇಳಿಮುಖದ ಮೇಲೆ ಪರಿಣಾಮ ಬೀರಿದೆ. ಆದರೂ ಯಾವುದೇ ಕೈಗಾರಿಕೆಗಳ ನಿರ್ವಹಣೆಯು ಸ್ಥಗಿತಗೊಂಡಿರುವುದಿಲ್ಲ ಹಾಗೂ ಉದ್ಯೋಗದಲ್ಲಿ ಕಡಿತ ಮಾಡಿರುವುದಿಲ್ಲ. ಆದರೂ ಮತ್ತೊಂದೆಡೆ ಕಡಿಮೆ ಪ್ರಮಾಣದಲ್ಲಿ ಈ ಉದ್ಯಮವು ಉದ್ಯೋಗ ನೀಡುವಿಕೆಯನ್ನು ಮುಂದುವರೆಸಿದೆ. ಆದರೆ ಈ ಉದ್ಯಮವು ವೆಚ್ಚಗಳನ್ನು ಕಡಿತಗೊಳಿಸುವ ದೃಷ್ಟಿಯಿಂದ ಉದ್ಯೋಗಿಗಳ ಇನ್‌ಕ್ರಿಮೆಂಟ್‌ಗಳ ಸ್ಥಗಿತ ಹಾಗೂ ಭತ್ಯೆಗಳಲ್ಲಿ ಮತ್ತು ಸಂಬಳ ಇತ್ಯಾದಿಗಳಲ್ಲಿ ಕಡಿತ ಮಾಡಲಾಗಿದೆ. ಪರಿಣಿತರು ಮುಂದುವರಿದ ಪರಿಮಾಣ ಇಳಿಕೆ ಮತ್ತು ಒತ್ತಡದ ಬೆಲೆಗಳ ಮಧ್ಯೆ ರೂಪಾಯಿಯ ದೃಢತೆಯು ಮಾಹಿತಿ ತಂತ್ರಜ್ಞಾನ ಕ್ಷೇತ್ರದ ಗಳಿಕೆಯ ಮೇಲೆ ಜೂನ್ ತ್ರೈಮಾಸಿಕದಲ್ಲಿ ಪರಿಣಾಮ ಬೀರುತ್ತದೆ

ಎಂದೂ ಯೋಚಿಸಿರುತ್ತಾರೆ. 2009–10ನೇ ಆರ್ಥಿಕ ವರ್ಷದ ಮೊದಲನೆ ತ್ರೈಮಾಸಿಕದಲ್ಲಿ ಉದ್ಯಮವು ಏರುಮುಖವನ್ನು ಕಾಣುವ ಸಂಭವವಿದೆ. ಇನ್ಫೋಸಿಸ್, ವಿಪ್ರೋ, ಟಿಸಿಎಸ್, ಕಗ್ನಿಜಂಟ್‌ಗಳಂತಹ ಕಂಪನಿಗಳು ಹಂತ ಹಂತವಾಗಿ ಉದ್ಯೋಗ ನೀಡುತ್ತಲಿದೆ.

ಇನ್ಫೋಸಿಸ್ ಸಂಸ್ಥೆಯ ಮೊದಲ ತ್ರೈಮಾಸಿಕದ ಫಲಿತಾಂಶಗಳು ನಿವ್ವಳ ಲಾಭದಲ್ಲಿ ಶೇಕಡ 17.3 ರಷ್ಟು ಬೆಳವಣಿಗೆ ದರವನ್ನು ಕಂಡಿದೆ.

ಈ ಆರ್ಥಿಕ ಹಿಂಜರಿತವನ್ನು ಸರಿದೂಗಿಸಲು ಸರ್ಕಾರವು 2ನೇ ಮತ್ತು 3ನೇ ದರ್ಜೆ ನಗರಗಳಾದ ಶಿವಮೊಗ್ಗ, ಮಂಗಳೂರು ಹಾಗೂ ಮೈಸೂರಿನಲ್ಲಿ ಕಿಯೋನಿಕ್ಸ್ ವತಿಯಿಂದ ಪಿಪಿಪಿ ಆಧಾರದ ಮೇಲೆ ಐಟಿ ಪಾರ್ಕನ್ನು ಸ್ಥಾಪಿಸಿ ಐಟಿ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸಲು ಉದ್ದೇಶಿಸಿದೆ. ಇದರಿಂದಾಗಿ ಸುಮಾರು 1 ಲಕ್ಷ ಜನರಿಗೆ ಉದ್ಯೋಗ ಕಲ್ಪಿಸಬಹುದಾಗಿರುತ್ತದೆ. ಇದಲ್ಲದೆ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಒಂದು ಲಕ್ಷಕ್ಕಿಂತ ಕಡಿಮೆ ಜನಸಂಖ್ಯೆಯುಳ್ಳ ತಾಲ್ಲೂಕು / ಹೋಬಳಿಯಲ್ಲಿ ಗ್ರಾಮೀಣ ಬಿ.ಪಿ.ಓ ಯೋಜನೆಯನ್ನು 2009–10ನೇ ಸಾಲಿನಿಂದ ಅನುಷ್ಠಾನಗೊಳಿಸಲಾಗುತ್ತಿದೆ. ಇದರಿಂದಾಗಿ ಪ್ರತಿ ಬಿ.ಪಿ.ಓ ಕೇಂದ್ರಗಳಲ್ಲಿ ಕನಿಷ್ಠ ನೂರು ಜನಕ್ಕೆ ಉದ್ಯೋಗ ಕಲ್ಪಿಸಲಾಗುತ್ತದೆ.

ಸಚಿವ ಸಂಪುಟವು ಇತ್ತೀಚೆಗಷ್ಟೆ ಪರಿಷ್ಕೃತ ಜೈವಿಕ ತಂತ್ರಜ್ಞಾನ ಪಾಲಿಸಿ–IIನ್ನು ಅನುಮೋದಿಸಿದ್ದು, ಇದರಲ್ಲಿ ಬಯೋಟೆಕ್ನಾಲಜಿಯನ್ನು ಅಭಿವೃದ್ಧಿ ಪಡಿಸುವ ಉದ್ದೇಶದಿಂದ ರಿಯಾಯಿತಿಗಳ ಮತ್ತು ಉತ್ತೇಜನಗಳ ಪ್ಯಾಕೇಜ್ ಅನ್ನು ಘೋಷಿಸಲಾಗಿದೆ.

ಜೀವಶಾಸ್ತ್ರ ವಿದ್ಯಾರ್ಥಿಗಳಿಗೆ ವೈಜ್ಞಾನಿಕ ಜ್ಞಾನ ಹೊಂದಲು (ಐಟಿ ಆದಾರಿತ) ಪ್ರೋತ್ಸಾಹಿಸುವ ದೃಷ್ಟಿಯಿಂದ, ಲಭ್ಯವಿರುವ ಮಾನವ ಸಂಪನ್ಮೂಲಗಳನ್ನು ಅಭಿವೃದ್ಧಿಗೊಳಿಸಲು ಬಿಟಿ ಫಿನಿಷಿಂಗ್ ಶಾಲೆಗಳನ್ನು ತೆರೆಯಲು ಉದ್ದೇಶಿಸಲಾಗಿದೆ.

2ನೇ ಹಾಗೂ 3ನೇ ಹಂತ ನಗರಗಳಲ್ಲಿ 5 ಬಯೋಟೆಕ್ ಪಾರ್ಕ್‌ಗಳನ್ನು ಸ್ಥಾಪಿಸಲೂ ಸಹ ಉದ್ದೇಶಿಸಲಾಗಿದೆ.

984 ಶ್ರೀ ನಾಗೇಂದ್ರಬಿ. : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೂಡ್ಲಿಗಿ ಪಟ್ಟಣದಲ್ಲಿ ಬಸ್ ನಿಲ್ದಾಣ ನಿಮಾಣ ಕಾರ್ಯಕ್ಕಾಗಿ ಬಿಡುಗಡೆಯಾದ ಮೊತ್ತ ಎಷ್ಟು;

ಆ) ಈ ಮೊತ್ತವು ಬಸ್ ನಿಲ್ದಾಣ ನಿರ್ಮಿಸಲು ಸಾಕಾಗುತ್ತಿಲ್ಲದಿರುವುದು ಸರ್ಕಾರಕ್ಕೆ ತಿಳಿದಿದೆಯೇ;

9-1/3